ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 116-120.**
**©IIMRD, Mysuru.**

IIMRD JOURNALS

**www.iimrd.com**

# ದೇವದಾಸಿ ಪದ್ಧತಿ: ಒಂದು ವಿಶ್ಲೇಷಣೆ

**(ಚೆನ್ನಣ್ಣ ವಾಲೀಕಾರರವರ ಕರ್ನಾಟಕ ದೇವದಾಸಿಯರ ಸಮಗ್ರ ಅಧ್ಯಯನ ಗ್ರಂಥವನ್ನು ಅನುಲಕ್ಷಿಸಿ)**

**ಡಾ. ರಮ್ಯ ಕೆ. ಆರ್.***

*ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ.ಪ್ರ.ದ.ಕಾಲೇಜು, ಸ್ವಾಯತ್ತ, ಗುಬ್ಬಿ.

***ಸಾರಾಂಶ:* (Abstract)**

*'ಕರ್ನಾಟಕ ದೇವದಾಸಿಯರ ಸಮಗ್ರ ಅಧ್ಯಯನ' ಚೆನ್ನಣ್ಣ ವಾಲೀಕಾರ ಅವರ ಸಮಗ್ರ ಅಧ್ಯಯನ ಗ್ರಂಥವಾಗಿದೆ. ನಾಡಿನ ದೇವದಾಸಿಯರ ಸಮಸ್ಯೆಗಳನ್ನು ಹಾಗೂ ಹೀನ ಸಂಸ್ಕೃತಿಯೊಂದರ ಪೋಷಕರು ಸಮಾಜಕ್ಕೆ ನೀಡಿದ 'ದುರ್ದಾನವೊಂದರ ಅಧ್ಯಯನವನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ 'ಕರ್ನಾಟಕ ದೇವದಾಸಿಯರ ಸಮಗ್ರ ಅಧ್ಯಯನ' ಕೃತಿಯನ್ನು ಅನುಲಕ್ಷಿಸಿ ದೇವದಾಸಿ ಪದ್ಧತಿ ಕುರಿತು ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು* (Keywords)** *ದೇವದಾಸಿ, ಪದ್ಧತಿಗಳು, ವೇದೋಪನಿಷತ್ತುಗಳು, ಹಿಂದೂಧರ್ಮ, ಗ್ರಾಮದೇವತೆ.*

**ಪೀಠಿಕೆ**

ಜಗತ್ತಿಗೆ ಜಗತ್ತು ಆಶ್ಚರ್ಯ ಮತ್ತು ಅಭಿಮಾನ ಪಡುವ ರೀತಿಯಲ್ಲಿ ವೇದೋಪನಿಷತ್ತುಗಳನ್ನು ರಚಿಸಿ, ಪತಂಜಲಿ, ಕಪಿಲಮುನಿ, ಗೌತಮ, ಜೈಮಿನಿ, ಬಾದರಾಯಣ ಪಾಣಿನಿ, ಯಾಜ್ಞವಲ್ಕ್ಯರಂತಹ ಮಹಾಮೇಧಾವಿಗಳನ್ನು, ತತ್ವಜ್ಞಾನಿಗಳನ್ನು, ಆಧ್ಯಾತ್ಮಿಕ ಶ್ರೇಷ್ಠರನ್ನು ನೀಡಿದ ದೇಶ ನಮ್ಮ ಭಾರತ. ಸಿಂಧೂ ಸಂಸ್ಕೃತಿಯಲ್ಲಿದ್ದ ಸ್ತ್ರೀ ಪುರುಷ ಸಮಾನತೆ, 'ಆ ನೋ ಭದ್ರ ಕೃತವೋಯಂತ ವಿಶ್ವತ:' (ಋಗ್ವೇದ) ಜಗತ್ತಿನೆಲ್ಲಾ ಕಿಟಕಿಗಳಿಂದ ಬೆಳಕು ಬರಲಿ ಎಂದ ವೇದಗಳು, (ರಚನಾಕಾರರಲ್ಲಿ ಸ್ತ್ರೀಯರೂ ಇದ್ದು) ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ ಹಾಗೂ ಸಾವಿನಿಂದ ಅಮೃತತ್ವಕ್ಕೆ ಕರೆದೊಯ್ಯಿರಿ ಎಂದ ಉಪನಿಷತ್ತುಗಳು, ಸಮಾಜ–ಧರ್ಮದ ಮೌಢ್ಯತೆ, ಅಜ್ಞಾನ ಪ್ರಶ್ನಿಸಿದ ಬುದ್ಧ, ಅಣುರೇಣು ತೃಣಕಾಷ್ಟಗಳಲ್ಲಿ, ಸಕಲ ಜೀವಾತ್ಮಗಳಲ್ಲಿ ದೇವರಿರುವನೆಂದು ಹೇಳುವ ಹಿಂದೂಧರ್ಮ ಹಾಗೂ ಇಡೀ ಪ್ರಪಂಚವೇ ಬೆರಗುಗೊಳ್ಳುವ ತತ್ವ ಸಿದ್ಧಾಂತಗಳನ್ನು ನೀಡಿದ ಭಾರತೀಯರು 'ಸ್ತ್ರೀ'ಯ ವಿಷಯದಲ್ಲಿ ದೇವರು, ಧರ್ಮ, ಪೂಜೆಯ ಹೆಸರಿನಲ್ಲಿ ಮಡಿಮೈಲಿಗೆಯ ಅನಿಷ್ಟವನ್ನು ಅಂಟಿಸಿದಾದರೂ ಏಕೆ?

ಬದಲಾವಣೆ ಜಗದ ನಿಯಮ ಎಂಬುದು ಸರಿಯಷ್ಟೇ. ಆದರೆ ಬದಲಾವಣೆ ಎಂಬುದು ಸ್ತ್ರೀತ್ವಕ್ಕೆ ಧಕ್ಕೆ ತರಬಾರದು. ವ್ಯಕ್ತಿತ್ವ ರೂಪಿಸಿಕೊಳ್ಳಲು ಬಿಡದ ಬಾಲ್ಯವಿವಾಹ, ಸ್ತ್ರೀ ಸ್ವಾತಂತ್ರ್ಯ ಕಸಿದ ವೈಧವ್ಯ ಪದ್ಧತಿ,

*Please cite this article as:* ಡಾ. ರಮ್ಯ ಕೆ. ಆರ್. (2023). ದೇವದಾಸಿ ಪದ್ಧತಿ: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.116–120.*

ವರನ ಪ್ರತ್ಯರ್ಥವಾಗಿ ಕೊಡಲೇಬೇಕೆಂಬ ಸ್ತ್ರೀ ಶೋಷಣೆಯಾದ ವರದಕ್ಷಿಣೆ, ಪಾತಿವ್ರತ್ಯ ಧರ್ಮದ ಮುಖವಾಡ ಹಾಕಿ ಸ್ತ್ರೀಯನ್ನು ಸುಟ್ಟ ಸತಿಪದ್ಧತಿ, ದೇವರು–ಧರ್ಮದ ಹೆಸರಿನಲ್ಲಿ ಸ್ತ್ರೀಯನ್ನು ಭೋಗದ ವಸ್ತುವನ್ನಾಗಿಸಿದ ದೇವದಾಸಿ ಪದ್ಧತಿಗಳೆಲ್ಲವೂ ಕಾಲಾಂತರದಲ್ಲಿ ಹುಟ್ಟಿಕೊಂಡ ಕ್ರೂರ ಬದಲಾವಣೆಗಳು. ಧರ್ಮವೆಂದರೆ ದೇವಸ್ಥಾನ ಕಟ್ಟುವುದಲ್ಲ, ಸಾಮಾಜಿಕ ಪೂಜೆಯಲ್ಲಿ ತೊಡಗಿಸಿಕೊಳ್ಳುವುದಲ್ಲ, ಮಾತು, ಉಪವಾಸವೂ ಅಲ್ಲ, ಧರ್ಮವೆಂದರೆ ಸಾಕ್ಷಾತ್ಕಾರ. ಸಾಕ್ಷಾತ್ಕಾರವೆಂದರೆ ಪ್ರಜ್ಞೆ, ಶೀಲ, ಕರುಣೆ, ಸೇವೆ, ಅಹಿಂಸೆ, ಸಹೋದರತ್ವ, ದಯೆ, ಸಮಾನತೆ, ಸ್ವಾಭಿಮಾನ ಮತ್ತು ಪ್ರೀತಿ ಇವೆಲ್ಲದರ ಒಟ್ಟು ಮೊತ್ತ ಸಾಕ್ಷಾತ್ಕಾರ. ಇದರಲ್ಲಿ ಜಾತಿ, ಧರ್ಮ, ವರ್ಣ, ವರ್ಗಭೇದಗಳಿಲ್ಲ. ಹಾಗಾದರೆ ಮನುಷ್ಯ ತನ್ನ ಸ್ವಾರ್ಥಸುಖಕ್ಕಾಗಿ ಸೃಷ್ಟಿಸಿದ ಅನಿಷ್ಟ ಪದ್ಧತಿಗಳು ಅಳಿದು ನೀತಿಯುತ ಸಮಾಜ ನಿರ್ಮಾಣವಾಗಬೇಕಲ್ಲವೆ?

ನೀತಿಯುತ ಧರ್ಮವನ್ನು ಪುನರ್ ಉಚ್ಛರಿಸಿದ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯರು, ಸಾಮಾಜಿಕ ಆಂದೋಲನ ಪ್ರಾರಂಭಿಸಿದ ಬಸವಣ್ಣನವರು, ಅಕ್ಷರಸ್ಥ ಸಮಾಜಕ್ಕೂ ಸ್ತ್ರೀ ಬೆಳಕಾಗಬಲ್ಲಳು ಎಂದ 'ಅಕ್ಷರದವ್ವ' ಸಾವಿತ್ರಿಫುಲೆ, ಸ್ತ್ರೀ ಸೇರಿದಂತೆ ಬಹಿಷ್ಕೃತ ಸಮಾಜದವರ ಉದ್ಧರಿಸಲು ಪ್ರಯತ್ನಿಸಿದ ಜ್ಯೋತಿರಾವ್ ಬಾಯಿ ಫುಲೆ, ಕ್ರೌರ್ಯತೆ ಮೆರೆದ ಸತಿಪದ್ಧತಿಯನ್ನು ಕಾನೂನಿನ ಮೂಲಕ ನಿಲ್ಲಿಸಿದ ಮಹಾನ್ ಚೇತನ ರಾಜಾರಾಂ ಮೋಹನ್‌ರಾಯ್, ವೇದಗಳಿಗೆ ಹಿಂತಿರುಗಿ ಎನ್ನುತ್ತಾ ಮಾನವತಾವಾದಿಯಾದ ದಯಾನಂದ ಸರಸ್ವತಿ, ಅಸ್ಪೃಶ್ಯರು ಯಾರು? ಎಂದ ಮಹಾನ್ ಚಿಂತಕ ಡಾ. ಬಿ.ಆರ್ ಅಂಬೇಡ್ಕರ್‌ರಂತಹ ಮಹನೀಯರು ಧರ್ಮ, ಸಮಾಜವನ್ನು ಸುಧಾರಿಸುತ್ತಾ ಸ್ತ್ರೀಯ ಶ್ರೇಯೋಭಿವೃದ್ಧಿಗೂ ಕಾರಣರಾದರು. ಆದರೂ ಇಂದಿಗೂ ಸ್ತ್ರೀತ್ವ ಕೆಣಕುವ ಧೋರಣೆ ಹಾಗೂ ಹೀನ ಪದ್ಧತಿಗಳು ಜೀವಂತವಾಗಿವೆ.

ಪ್ರಾಚೀನ ಭಾರತದಲ್ಲಿ ದಾಸ ಪದ್ಧತಿಯ ರೂಪದಲ್ಲಿ ಶೋಷಣೆ ಜನ್ಮ ತಾಳಿ, ಸಾಮಂತರ ಅಧೀನದಲ್ಲಿ ಭೂದಾಸರ ರೂಪ ಪಡೆದು, ಯುದ್ಧದಲ್ಲಿ ಗೆದ್ದು ತಂದ ಗಂಡು–ದಾಸರದ್ದು ಮನೆ, ಹೊಲಗೆಲಸವಾದರೆ ಹೆಣ್ಣುದಾಸಿಯರ ಕೆಲಸ ಹಾಸಿಗೆಯದ್ದಾಗಿತ್ತು. ಮೊಘಲರ ಕಾಲದಲ್ಲಿ ಅವರ ಅಂತಃಪುರಗಳಲ್ಲಿ ಬಹಳಷ್ಟು ದಾಸದಾಸಿಯರನ್ನು ನಪುಂಸಕರನ್ನಾಗಿ ಇರಿಸಿಕೊಂಡಿದ್ದರು. ಇದಕ್ಕೆ ಬ್ರಿಟೀಷರೂ ಹೊರತಾಗಿರದೆ ಆಧುನಿಕ ಯುಗದಲ್ಲಿ ಮನೆಗೆಲಸದ ನೆಪವೊಡ್ಡಿ ದಾಸಿಯರನ್ನು ನೇಮಕ ಮಾಡಿಕೊಂಡರು. ದೇವರ ಹೆಸರಿನಲ್ಲಿ ಶೋಷಣೆಯೂ ಇದಕ್ಕೆ ಹೊರತಾಗಲಿಲ್ಲ.

ಆದಿಮಾನವನಿಂದ ಆಧುನಿಕಯಾನದವರೆಗೆ ವಿಶ್ವದಲ್ಲಿ ಅವ್ಯಕ್ತ ಶಕ್ತಿಗೆ ಒಂದಲ್ಲ ಒಂದು ಬಗೆಯ ಕಾಣಿಕೆ ಸಲ್ಲಿಸುತ್ತ, ಅರ್ಪಿಸುತ್ತ ಬಲಿಕೊಡುವ ಪದ್ಧತಿಯನ್ನು ಕಾಣಬಹುದು. ಜಗತ್ತಿನ ಎಲ್ಲ ಧರ್ಮಗಳಲ್ಲೂ ಅರ್ಪಣಾಭಾವ ಇದೆ. ಯಾವುದೋ ಒಂದು ಶಕ್ತಿ ಜಗತ್ತನ್ನು ನಿಯಂತ್ರಿಸುತ್ತದೆಯೆಂಬ ಬಲವಾದ ನಂಬಿಕೆಯು ಆರಾಧನೆಗೆ ನಾಂದಿ ಹಾಡಿ ದೇವರ ಸೃಷ್ಟಿಯಾದದ್ದು. ಆ ದೇವರನ್ನು ಓಲೈಸಲು ಪ್ರಿತ್ಯರ್ಥವಾಗಿ ನಾನಾ ಬಗೆಯ ಅರ್ಪಣೆ, ಹಾಗೆಯೇ ಭಯದಿಂದ ಹುಟ್ಟಿದ ಆದಿ–ಅಂತ್ಯವಿಲ್ಲದ ನಂಬುಗೆ, ಸಂಪ್ರದಾಯಗಳು ಭ್ರಮಾ ಜಗತ್ತನ್ನು ಸೃಷ್ಟಿಸಿ ದೈವದ, ಧರ್ಮದ ಹೆಸರಿನಲ್ಲಿ ಜನರನ್ನು ಹಿಂಸಿಸಿದ್ದು ನೂರಾರು ಅರ್ಥಹೀನ ಆಚರಣೆಗಳಲ್ಲಿ. ಮಳೆ–ಬೆಳೆ ಬರಲೆಂದು ದನ–ಕರು, ಜನರಿಗೆ ಬಂದ ರೋಗ–ರುಜಿನಗಳು ಹೋಗಲೆಂದು ದೇವರಿಗೆ ಪ್ರಾಣಿಗಳನ್ನು ಕಾಣಿಕೆ ಕೊಟ್ಟಂತೆ, ದೇವರಿಗೆ ಮುಡಿಪಾಗಿ ದೇವರ

ಸೇವೆಗೆ ಹೆಣ್ಣುಮಗಳು ಇರಬೇಕೆಂದು ಪ್ರಾರಂಭವಾಗಿ, ಕಾಲ ಗತಿಸಿದಂತೆಲ್ಲಾ ದೇವರ ಸೇವೆಗಿದ್ದವಳು ದೇವರ ಪ್ರತಿನಿಧಿಗಳೆನಿಸಿದ ಭೂಸುರರ ಭೋಗಕ್ಕೆ ಬಲಿಯಾದಳು. ಪವಿತ್ರ ಮತ್ತು ಪೂಜ್ಯತೆಯ ನೆಪವೇಳಿ ಪ್ರಾರಂಭವಾದ ದೇವದಾಸಿ ಪದ್ಧತಿಯು ಕಾಲಾಂತರದಲ್ಲಿ ಅಪವಿತ್ರಗೊಂಡಿತು. ಬಹುಶಃ ಶುದ್ಧಳಾಗಿದ್ದ ಪೂಜಾರಿಣಿಯು ಆರ್ಯೀಕರಣಗೊಂಡಾಗ ವೈದಿಕ ಅಶುದ್ಧಳಾಗಿ, ಭೋಗದ ವಸ್ತುವಾಗಿ, ದೇವದಾಸಿಯಲ್ಲಿ ಸರ್ವರ ದಾಸಿಯಾಗಿ ಹೋದಳು.

ಒಂದು ಕಾಲಕ್ಕೆ ದೇವಾಲಯಗಳೆಲ್ಲವೂ ಭಕ್ತರ, ಜನಗಳ ಶ್ರದ್ಧಾ, ನಿಷ್ಠಾ, ಸಾಂಸ್ಕೃತಿಕ ಪ್ರತೀಕಗಳಾಗಿದ್ದು, ನಂತರ ಧರ್ಮದ ಹೆಸರಲ್ಲಿ ಅಪಮೌಲ್ಯಗೊಂಡವು. ಆದಿಮಾನವನ ಅಲೆಮಾರಿತನ, ಪಶುಪಾಲನೆ, ಕೃಷಿ, ಸಮುದಾಯಿಕ ಜೀವನ, ಗ್ರಾಮಗಳ ಸ್ಥಾಪನೆ, ಊರ ಕಾಯಲು ಗ್ರಾಮದೇವತೆ, ಆಕೆಯ ಸೇವೆಗೆ ಸ್ತ್ರಿ ನೇಮಕ ಪ್ರಾರಂಭವಾಯಿತು. ಬಹುಶಃ ಈಕೆಯೇ ಪ್ರಥಮ ದೇವದಾಸಿ. ಕ್ರಿ.ಶ.ನಾಲ್ಕನೆಯ ಶತಮಾನದ ಗುಪ್ತರ ಕಾಲದ ಉಜ್ಜಯಿನಿ ಮಹಾಕಾಲ ದೇವಾಲಯದಿಂದ ದೇವದಾಸಿಯರ ಅಧಿಕೃತ ಇತಿಹಾಸ ಆರಂಭವಾಗುವುದು. ಅದಕ್ಕೂ ಮುನ್ನ ಇದ್ದಿರಬಹುದಾದರೂ ದಾಖಲೆಗಳಿಲ್ಲ. ದೇವದಾಸಿ ಪದ್ಧತಿಯ ಆರಂಭ ಅಸ್ಪಷ್ಟವಾಗಿದೆ. ಆದರೆ ಕಾಲಕಾಲಕ್ಕೆ ಕಾರಣಾಂತರಗಳ, ಸಂದರ್ಭಗಳ ರೂಪಾಂತರಗೊಂಡ ದೇವದಾಸಿ ಪದ್ಧತಿಯು ವಿಭಿನ್ನ ರೂಪ ತಳೆದು ವಿಸ್ತರಿಸಿತು.

ಅಂದು ದೇವರು, ಧರ್ಮ, ರಾಜಾಲಯ, ಭಕ್ತಿ, ಕಲೆ, ರಾಜಸೇನೆ ಹೆಸರಿನಲ್ಲಿ 'ಸಾರ್ವಜನಿಕ ಹೆಣ್ಣು' ಆಗಿ ನೋಡುವ ನೀಚಪದ್ಧತಿ ಇಂದಿಗೂ ಇರುವುದು ಸಮಾಜದಲ್ಲಿ ಸ್ತ್ರೀಯ ಶೋಷಣೆಯನ್ನು ವಿವರಿಸುತ್ತದೆ. ಮೌಢ್ಯತೆ, ಅಜ್ಞಾನ, ಅನಕ್ಷರತೆ, ಬಡತನ, ಹಸಿವು ಕಾರಣಗಳಾಗಿ ದೇವರ ಹೆಸರಿನಲ್ಲಿ ತಾಳಿ ಕಟ್ಟಿಸಿಕೊಂಡು ಲೈಂಗಿಕತೆಯ ವ್ಯಾಪಾರಕ್ಕಿಳಿಯುವ ಅವಿವಾಹಿತ ಹೆಣ್ಣುಮಕ್ಕಳು ದೇವದಾಸಿಯರಾದರೆ, ಮುದ್ರೆ ಹಾಕಿ ದೇವರಿಗೆ ಬಿಟ್ಟ ಹೆಣ್ಣುಗಳು ಬಸವಿಯೆನಿಸಿಕೊಳ್ಳುತ್ತಿದ್ದರು. ಈ ಹೆಣ್ಣುಗಳನ್ನು ಪ್ರತಿಷ್ಠಿತರು ತಮ್ಮ ಸೇವಕಿಯನ್ನಾಗಿ ಮಾಡಿಕೊಂಡ ಉದಾಹರಣೆಗಳೇ ಹೆಚ್ಚು. ಪ್ರಕೃತಿ ನಿಯಮಗಳ ತಿಳುವಳಿಕೆಯ ಅಭಾವದಲ್ಲಿ ಹುಟ್ಟಿಕೊಂಡ ಹಲವು ಅನುಕರಣೆಯ ಆಚರಣೆಗಳು ನಂತರವೂ ನಶಿಸದೆ ಗಾಢವಾಗಿ ಬೇರು ಬಿಟ್ಟು ಆಚರಿಸಲ್ಪಡುತ್ತಿವೆ. ನಮ್ಮ ಸಾಮಾಜಿಕ ವ್ಯವಸ್ಥೆಯ ಜೀವದೊಡಲಿನಲ್ಲಿ ಜೀವಂತವಾಗಿಯೇ ಅಡಗಿ ಕುಳಿತು, ನಮ್ಮ ಸಮಾಜದ ಅಸ್ವಸ್ಥತೆಯನ್ನು ಬಿಂಬಿಸುತ್ತಿರುವುದು ದೇವದಾಸಿ ಪದ್ಧತಿ.

ಪ್ರಾಚೀನ ಕಾಲದಲ್ಲಿ ದೇವದಾಸಿಯಾಗುವುದು ಅಥವಾ ಆ ವೃತ್ತಿ ಮಾಡುವುದು ಅನೈತಿಕ, ಅಸಾಮಾಜಿಕ ಮತ್ತು ಅಪಮಾನಕರ ಎನಿಸುವ ಬದಲು ಅದು ದೈವನಿಯಾಮಕ ಎಂಬ ನಂಬಿಕೆಯಿತ್ತು. ಹಾಗೆಯೇ ದೇವದಾಸಿ ಮನೆಯಲ್ಲಿ ಹುಟ್ಟುವ ಹೆಣ್ಣು ಮಗುವು ತನಗಿರಿವಿಲ್ಲದಂತೆಯೇ ವಯಸ್ಸಲ್ಲದ ವಯಸ್ಸಿನಲ್ಲಿ ತುರುಬು ಕಟ್ಟಿ ಹೂ ಮುಡಿಯುವ, ಕೆನ್ನೆಗೆ ಅರಿಶಿಣ, ಕಾಸಗಲದ ಕುಂಕುಮ ಇಟ್ಟುಕೊಳ್ಳುವ ದೇವದಾಸಿ ಸಂಸ್ಕೃತಿಕೆಗೆ ತನ್ನನ್ನು ತಾನೇ ತೆತ್ತುಕೊಂಡುಬಿಡುತ್ತಿದ್ದುದು ಸಾಮಾನ್ಯವಾಗಿತ್ತು. ಈ ದೇವದಾಸಿಯರದು ಮುಗಿಯದ ಗೋಳು, ಯಾರನ್ನೂ ಮುಟ್ಟದ ಆಕ್ರಂದನ. ಗುರುಗಳು ನೀಡಿದ್ದಾರೆಂದೋ, ತಾಯಿ ವಾರಾಂಗನೆಯಾಗಿದ್ದಳೆಂದೋ, ವಿವಾಹ ಬಂಧನದಲ್ಲಿರಲು ಬಯಸುವುದಿಲ್ಲವೆಂದೋ, ತಾಯಿಯ ಉದ್ಯೋಗ ಮುಂದುವರೆಸಬೇಕೆಂದೋ, ತಮ್ಮ ಜಾತಿ ಧರ್ಮವೋ

ಹೇಳುವಂತೆ ವಂಶಪಾರಂಪರ್ಯವಾಗಿ ಮುಂದುವರೆಸಬೇಕೆಂದು ದೇವಿ ಸೇವೆಯನ್ನು ಮಾಡಲು ಇಂದಿಗೂ ದೇವದಾಸಿಯಾಗುತ್ತಿದ್ದಾರೆ. ಈ ವ್ಯವಸ್ಥೆಯನ್ನು ಪೋಷಿಸಿದವರು, ಪ್ರಶಂಶಿಸಿದವರೆಲ್ಲಾ ಹೃದಯಹೀನರೆ.

ನತದೃಷ್ಟ ಮಾನವ ಜೀವಗಳು ಘೋರಾಂಧಕಾರದ ಬದುಕು ಹೊಂದಿರುವ ದೇವದಾಸಿಯರಲ್ಲೂ ಅರ್ಪಣಾಭಾವದ ತಾತ್ವಿಕತೆಯಿದೆ, ಮುಗ್ಧ ಕೂಸಿನ ರೂಪದಲ್ಲಿ ದೇವರೆದುರಿಗೆ, ಶುದ್ಧಾರ್ಥದಲ್ಲಿ ಮೈಮೇಲಿನ ಮೋಹ ತೆಗೆದು ದೇವರನ್ನು ಪೂಜಿಸುವುದು ಎಂಬ ಸೇವಾ ಮನೋಭಾವನೆ ಇದೆ. ಹೀಗೆ ಶುದ್ಧಳಾಗಿದ್ದ ಸ್ತ್ರೀಯು ಕಾಲಾನಂತರದಲ್ಲಿ ಅಶುದ್ಧಳಾಗಿ, ಭೋಗದ ವಸ್ತುವಾಗಿ ಸರ್ವರ ದಾಸಿಯಾಗಿ ಹೋಗಿದ್ದು ಮಾತ್ರ ವಿಪರ್ಯಾಸ. ಬಡತನ, ಅಜ್ಞಾನ, ಅಂಧಶ್ರದ್ಧೆ, ಅಸಹಾಯಕ ಬದುಕು, ವರ್ಗಭೇದ, ಜಾತಿವ್ಯವಸ್ಥೆ, ಅಸ್ಪೃಶ್ಯತೆಗೆ ತುತ್ತಾದ ಬಡಜನ ತಮ್ಮ ಬದುಕು ಸಾಗಿಸಲು ಗ್ರಾಮದೇವತೆಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಬಸವಿ, ಜೋಗತಿ ದೇವದಾಸಿಯರನ್ನಾಗಿ ಮಾಡಿ ಬದುಕು ಕಂಡುಕೊಂಡರು. ಹಾಗೆ ದೇವರಿಗೆ ಅರ್ಪಿತವಾಗಿದ್ದ ಈ ದೇವದಾಸಿಯರು ಕಾಲದ ಏರಿಳಿತಕ್ಕೆ ಹೊಂದಿಕೊಂಡು ಹೊಟ್ಟೆಪಾಡಿಗಾಗಿ ರಾಜರು, ಪುರೋಹಿತರು, ಅಧಿಕಾರಿಗಳು ಮತ್ತು ಹಣವಂತರಾದ ಸುಬೇದಾರ, ಸರದಾರ, ಸಾಮಂತರ, ಜಮೀನ್ದಾರರು, ಹಳ್ಳಿಗಳ ದೇಸಾಯಿ, ಜಹಗೀರುದಾರರ ಭೋಗಕ್ಕೆ ಬಳಕೆಯಾದರು. ಅದಕ್ಕೂ ಮೀರಿ ಸಾರ್ವಜನಿಕ ಕಾರ್ಯಕ್ರಮಗಳ ಅಂಗಭೋಗ, ರಂಗಭೋಗಕ್ಕೆ, ಯಾತ್ರಾರ್ಥಿಗಳ ಸೇವೆಗೆ ನಿಯೋಜಿಸಲ್ಪಟ್ಟರು.

ಸಂಸ್ಕೃತಿ ವ್ಯವಸ್ಥೆಯ ಪಿತೂರಿಯಿಂದ ವಿಕೃತಿಯ ಕಡೆಗೆ ನಡೆದಂತಹ ದೇವದಾಸಿಯರ ಮನೋಲೋಕದ ಚಿಂತನೆ, ಭಾವನೆ, ಅಳಲು ಮತ್ತು ಮಡುಗಟ್ಟಿದ ನೋವಿಗೆ ಸ್ಪಂದಿಸುವವರಾರು? ಪುರಾಣ, ಕಥೆ ಸೃಷ್ಟಿಸಿ, ಧಾರ್ಮಿಕ ಎಂಬ ನಂಬಿಕೆ ಮುಂದಿಟ್ಟು, ಅಧಾರ್ಮಿಕ, ಅಮಾನವೀಯ, ಪೈಶಾಚಿಕ ಹಾಗೂ ಮಾನವೀಯತೆಗೆ ಮಸಿ ಬಳಿಯುವಂತಹ ದುಷ್ಟ ಸಂಪ್ರದಾಯವನ್ನು ಕೊನೆಗಾಣಿಸುವವರಾರು? ದೇವದಾಸಿಯರ ಆಕ್ರಂದನದ ಕೂಗಿಗೆ ಕೊನೆಯಿಲ್ಲವೆ?

ಸ್ತ್ರೀಯನ್ನು ಅಪವಿತ್ರ ಮತ್ತು ಅಶಕ್ತಳನ್ನಾಗಿಸಿದ ದೇವದಾಸಿ ವ್ಯವಸ್ಥೆಯು ಆಕೆಯ ಆತ್ಮಗೌರವವನ್ನು ನಾಶಪಡಿಸಿ, ಮಾನಸಿಕವಾಗಿ ದುರ್ಬಲಳನ್ನಾಗಿಸಿತು. ಸ್ತ್ರೀಯನ್ನು ಅಶಕ್ತಳನ್ನಾಗಿಸಿದರೆ ಶಕ್ತ ಸಮಾಜದ ನಿರ್ಮಾಣ ಸಾಧ್ಯವೆ? ಈ ಅಮಾನವೀಯ ಪದ್ಧತಿಯನ್ನು ಒಪ್ಪಿಕೊಂಡು ಬಾಳಿದ ಸಾವಿರಾರು ಮಂದಿಯ ಮೌನದ ಮಾತುಗಳು ಧ್ವನಿರೂಪಕಗಳಾಗಿ ಕಾಣಿಸಿಕೊಳ್ಳಬೇಕು. ಇದು ಸಾಮುದಾಯಿಕ ಹೋರಾಟವಾಗಬೇಕು. ಅಸಮಾನತೆ ಅತ್ಯಂತ ಭೀಕರವಾದಾಗ ಅದು ದೇವದಾಸಿಯಂತಹ ಅನಿಷ್ಟ ವ್ಯವಸ್ಥೆಯ ಸ್ವರೂಪವನ್ನು ಧರಿಸುತ್ತದೆ. ಇದನ್ನು ಹಿಮ್ಮೆಟ್ಟಿಸುವುದು ಸಮಾನತೆಯ ಆಶಯವುಳ್ಳವರ ಜವಾಬ್ದಾರಿಯಾಗಿದೆ. ಇದಕ್ಕಾಗಿ ಮಾನವೀಯ ಕಾಳಜಿ ಬೇಕು. ಆಗಷ್ಟೇ ಸಮಾಜದಲ್ಲಿ ಬೇರೂರಿರುವ ಅಮಾನವೀಯ ವ್ಯವಸ್ಥೆಗೆ ವಿಮೋಚನೆ ಸಿಗುವುದು.

**ಪರಾಮರ್ಶನ ಗ್ರಂಥಗಳು**


- ಚೆನ್ನಣ್ಣ ವಾಲೀಕಾರ. (2001). ಕರ್ನಾಟಕ ದೇವದಾಸಿಯರ ಸಮಾಜೋ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

- ಚೆನ್ನಣ್ಣ ವಾಲೀಕಾರ. (1933). ಜಾನಪದ ಲೋಕ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.
- Rekha Pande S. Devadasis in South India – A Journey from saced to a prefane Spaces: (2017). Jeevanandam Kalpaz Publications, New Delhi.
- Saskia C krsenboom. (2016). Nityasumangali-Devadasi Tradition in South India, Boom Motilal banarasidass Publications, Delhi
- Jamana Das. K. (2007). Devadasis: Ancient and modern, Kalpaz Publications, New Delhi